ತೆಗೆದುಕೊಂಡಿರಿ ಎಂದು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಮಾಹಿತಿ ಇದ್ದರೆ ಕೊಡಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಅಧ್ಯಕ್ಷರೇ, ಆ ಮಾಹಿತಿಯನ್ನು ಆಮೇಲೆ ಅವರಿಗೆ ತರಿಸಿ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡದೇ ಇರುವು ದರಿಂದ ದಯವಿಟ್ಟು ಇದನ್ನು ವಿತ್ ಹೆಲ್ಡ್ ಮಾಡಬೇಕು. ಅವರು ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಬೇಕಾದರೆ ನಾಳೆ ದಿವಸ ಉತ್ತರ ಕೊಡಲಿ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್‌ನನ್ನು ಹೇಗೆ ವಿತ್ ಹೆಲ್ಡ್ ಮಾಡುವುದು ? ಮಾನ್ಯ ಸಚಿವರು ಹೊಸಬರಿದ್ದಾರೆ ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಯಾವಾಗ ಸೆಕ್ಷನ್ 144 ಜಾರಿ ಮಾಡಿದಿರಿ ಮತ್ತು ಅದನ್ನು ಯಾವಾಗ ಲಿಫ್ಟ್ ಮಾಡಿದಿರಿ ಎನ್ನುವ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ, ಅದನ್ನು ನಾಳೆ ತರಿಸಿ ಅವರಿಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಇನ್ನೊಂದು ಶಾಂತಿ ಸಮಿತಿಯ ಬಗ್ಗೆ ಕೇಳಿದ್ದಾರೆ ಅದರ ಬಗ್ಗೆ ಹೇಳಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ನಾನು ಅಲ್ಲಿಗೆ ಭೇಟ್ಟಿ ಮಾಡುವುದಕ್ಕಿಂತ ಮುಂಚಿತವಾಗಿ ಸ್ಥಳೀಯ ಶಾಸಕರಿಗೆ ಫೋನ್ ಮುಖಾಂತರವಾಗಿ ತಿಳಿಸಿದ್ದೆ, ಆದರೂ ಸಹ ಅವರು ಬರಲಿಲ್ಲ. ಆದರೂ ನಾನು ನನ್ನ ಕರ್ತವ್ಯವನ್ನು ಸರ್ಕಾರದ ಪರವಾಗಿ ಮಾಡಿದ್ದೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—23ನೇ ತಾರೀಖು ಈ ಘಟನೆ ನಡೆದಾದ ಮೇಲೆ ಎಷ್ಟು ಜನರನ್ನು ಅರೆಸ್ಟ್ ಮಾಡಿದಿರಿ ? ಆಮೇಲೆ ಶಾಂತಿ ಸಮಿತಿ ರಚನೆಯಾದ ಮೇಲೆ ಶಾಂತಿ ಸಮಿತಿಯು ಏತಕ್ಕೆ ವಿಸರ್ಜನೆಯಾಯಿತು ? ಆ ಸಮಿತಿಯ ಛೇರ್ಮನ್‌ರವರು ಏತಕ್ಕೆ ರಾಜೀನಾಮೆ ಕೊಟ್ಟರು ? ಎನ್ನುವ ಬಗ್ಗೆ ವಿವರಣೆ ಕೊಡಲಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ಅವರಿಗೆ ಒದಗಿಸಿ.

2. ವಿಷಯ : ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಕಬ್ಬನ್ನು ಸರಬರಾಜು ಮಾಡಿದ್ದಕ್ಕೆ ಸಕ್ಕರೆ ಕಾರ್ಖಾನೆಗಳಿಂದ ಹಣ ಪಾವತಿ ಮಾಡಲು ಹಾಗೂ ಕಬ್ಬಿಗೆ ಸೂಕ್ತ ಬೆಲೆ ನಿಗದಿ ಪಡಿಸಲು ಮತ್ತು ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಲು ಒತ್ತಾಯಿಸಿ ರೈತ ಸಂಘದ ಪ್ರತಿನಿಧಿಗಳು ಧರಣಿ ಹೂಡಿದ ವಿಚಾರವನ್ನು ಕೈಗಾರಿಕಾ ಮಂತ್ರಿಗಳವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳು).– ಸಭಾಧ್ಯಕ್ಷರೇ, ಹೊಸ ಸರ್ಕಾರ ಅಧಿಕಾರ ವಹಿಸಿದ ಮೇಲೆ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ರೈತ ಮುಖಂಡರ ಜೊತೆಗೆ 5 ಸಲ ಚರ್ಚೆ ಮಾಡಿದ್ದೇವೆ. ಅವರ ಕೆಲವು ಸಮಸ್ಯೆಗಳಿಗೆ ಪರಿಹಾರ ಕೂಡಾ ಒದಗಿಸಿ ಕೊಟ್ಟಿದ್ದೇವೆ. ರಾಜ್ಯ ಸರ್ಕಾರ, ತನ್ನ ಅಧಿಕಾರದ ಇತಿಮಿತಿಯಲ್ಲಿ ರೈತರ ಇತರ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಾ ಬಂದಿದೆ. ಅಲ್ಲದೇ ಮುಖ್ಯ ಮಂತ್ರಿಗಳು ಮತ್ತು ನಾನು ಈ ಸಮಸ್ಯೆಗಳ ಬಗ್ಗೆ ಕೇಂದ್ರ ಮಂತ್ರಿಗಳೊಡನೆ ಚರ್ಚೆ ಮಾಡಿ ರೈತರಿಗೆ ಅನುಕೂಲವಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಒತ್ತಾಯಿಸಿದ್ದೇವೆ.

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಕೂಡಾ ರೈತನಾಯಕರ ಜೊತೆಗೆ ಅನೇಕ ಸಲ ಮಾತುಕತೆ ನಡೆಸಿದ್ದೇನೆ.

ಕಬ್ಬಿನ ಬೆಲೆ ನಿಗದಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ವಿಶೇಷ ಇರುತ್ತದೆ. ಆದರೆ, ಕಾಲ ಕಾಲಕ್ಕೆ ರಾಜ್ಯ ಸರ್ಕಾರಗಳು ರೈತರ ಹಿತಾಸಕ್ತಿ ರಕ್ಷಿಸುವುದಕ್ಕಾಗಿ ಕೆಲವೊಂದು ಹೆಚ್ಚಿನ ರಿಯಾಯಿತಿ ಗಳನ್ನು ಕೊಡುತ್ತಾ ಬಂದಿವೆ. ಕೇಂದ್ರ ಸರ್ಕಾರವು 82–83 (ಅಕ್ಟೋಬರ್‌ನಿಂದ ಸೆಪ್ಟೆಂಬರ್) ಕಬ್ಬಿನ ಕನಿಷ್ಟ ಬೆಲೆಯನ್ನು ಒಂದು ಟನ್‌ಗೆ 130 ರೂ. 8.5 ಇಳುವರಿಗೆ ನಿರ್ಧರಿಸಿತ್ತು. ಕೇಂದ್ರ ಸರ್ಕಾರವು 83–84 ವರ್ಷದ ಬಗ್ಗೆ ಇನ್ನೂ ಬೆಲೆ ನಿಗದಿ ಮಾಡಿಲ್ಲ. ಕರ್ನಾಟಕದಲ್ಲಿ ಸಕ್ಕರೆ ಅರೆಯುವ ಕೆಲಸವು ಕೆಲವು ಕಾರ್ಖಾನೆಗಳಲ್ಲಿ ಜೂನ್–ಜುಲೈನಲ್ಲಿ ಪ್ರಾರಂಭವಾಗುತ್ತದೆ. ಯಾವುದೇ ವರ್ಷದ ಕಬ್ಬನ್ನು ಅರೆಯುವ ಮೊದಲು ಕಬ್ಬಿನ ಬೆಲೆಯನ್ನು ನಿಗದಿ ಮಾಡುವ ಪರಿಹಾರ ಅಥವಾ ನಿಯಮ ರಾಜ್ಯದಲ್ಲಿ ಇರುವುದಿಲ್ಲ. ಆದಾಗ್ಯೂ, ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವುದನ್ನು ಪ್ರಾರಂಭಿಸುವ ಮೊದಲು ರೈತ ಮುಖಂಡರ ಜೊತೆ ಚರ್ಚಿಸಿ ಎಷ್ಟು ಮುಂಗಡ ಹಣ ಕೊಡಬೇಕು ಎನ್ನುವ ಬಗ್ಗೆ ಅನೌಪಚಾರಿಕವಾಗಿ ನಿರ್ಣಯ ತೆಗೆದುಕೊಳ್ಳುವ ರೂಢಿ ನಡೆದು ಬಂದಿದೆ. ರಾಜ್ಯದಲ್ಲಿಯ ಉಳಿದ ಸಕ್ಕರೆ ಕಾರ್ಖಾನೆಯವರು ರೈತರ ಪ್ರತಿನಿಧಿಗಳ ಜೊತೆ ಅನೌಪಚಾರಿಕವಾಗಿ ಒಪ್ಪಂದ ಮಾಡುತ್ತಾ ಬಂದಿರುತ್ತಾರೆ. ಈ ಸಲ ರೈತ ಪ್ರತಿನಿಧಿಗಳೊಡನೆ ಚರ್ಚಿಸಿದ ನಂತರ ಸರ್ಕಾರವು ಒಂದು ಟನ್ ಕಬ್ಬಿಗೆ 8.5 ಇಳುವರಿಗೆ 180 ರೂ. ಮುಂಗಡ ಹಣ ಕೊಡುವ ಬಗ್ಗೆ ನಿರ್ಣಯ ತೆಗೆದುಕೊಂಡಿರುತ್ತದೆ. ಮತ್ತು

ಖರೀದಿ ಸುಂಕ ರೂ. 5–60 ರೈತರಿಗೆ ಮರು ಪಾವತಿ ಮಾಡಲು ಸಹಾ ನಿರ್ಣಯಿಸಿದೆ. ಸರ್ಕಾರವು ಬೇರೆ ಬೇರೆ ರಾಜ್ಯ ಸರ್ಕಾರಗಳ ನಿರ್ಣಯಗಳನ್ನು ಮತ್ತು ನಮ್ಮ ರಾಜ್ಯದ ಎಲ್ಲಾ ಕಬ್ಬು ಬೆಳೆಗಾರರ ಹಿತವನ್ನು ಗಮನಕ್ಕೆ ತೆಗೆದುಕೊಂಡು ಈ ನಿರ್ಣಯವನ್ನು ತೆಗೆದುಕೊಂಡಿದೆ.

ಸರ್ಕಾರದ ಈ ನಿರ್ಣಯದ ನಂತರ ಮಂಡ್ಯ ಜಿಲ್ಲೆಯ ಮೈಸೂರು ಸಕ್ಕರೆ ಕಾರ್ಖಾನೆಯವರು ಒಂದು ಪ್ರಕಟಣೆಯನ್ನು ಹೊರಡಿಸಿ ದಿನಾಂಕ 20–7–83ಕ್ಕೆ ಸಕ್ಕರೆ ಅರೆಯುವ ಕಾರ್ಯ ಪ್ರಾರಂಭ ಮಾಡುವ ಬಗ್ಗೆ ಮತ್ತು ರೈತರು ಕಬ್ಬನ್ನು ತರಲು ಕೇಳಿಕೊಂಡು ಪತ್ರಿಕೆಗಳಲ್ಲಿ ಜಾಹಿರಾತನ್ನು ಪ್ರಕಟಿಸಿದರು. ಈ ಪ್ರಕಟಣೆಯಲ್ಲಿ ಒಂದು ಟನ್ ಕಬ್ಬಿಗೆ 208 ರೂ. ಮತ್ತು 5–60 ರೂ. ಮಾರಾಟ ಸುಂಕದ ಸಹಾಯ ಧನವನ್ನು ಸೇರಿಸಿ 213-90 ರೂ. ಕೊಡುವುದಾಗಿ ತಿಳಿಸಿದರು. ಆ ನಂತರ ಮಂಡ್ಯ ಜಿಲ್ಲೆಯ ರೈತಸಂಘದ ನಾಯಕರು ಮಂಡ್ಯ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಾಕ ನಿರ್ದೇಶಕರಿಗೆ ಒಂದು ನೋಟೀಸನ್ನು ಕೊಟ್ಟು ಕಬ್ಬಿನ ಬೆಲೆಯನ್ನು ಒಂದು ಟನ್‌ಗೆ 300 ರೂ. ಕೊಡಬೇಕೆಂದೂ, ಬೆಲೆ ಕೊಡದೆ ಇದ್ದಲ್ಲಿ ಕಬ್ಬನ್ನು ಸರಬರಾಜು ಮಾಡುವುದಿಲ್ಲವೆಂದೂ ಮತ್ತು ಸಕ್ಕರೆ ಕಾರ್ಖಾನೆ ಮತ್ತು ಡಿಸ್ಟಿಲರಿ ಮತ್ತು ಆಸಿಟಿಕ್ ಘಟಕಗಳಿಗೆ 30-7-83 ರಂದು ಬೀಗ ಹಾಕುತ್ತೇನೆಂದು ತಿಳಿಸಿದರು. ನಂತರ ಮಂಡ್ಯ ಜಿಲ್ಲೆಯ ಶಾಸಕರುಗಳಾದ ಸರ್ವಶ್ರೀ 1) ಬಂಡಿ ಸಿದ್ದೇಗೌಡರು, 2) ಕೆಂಪೇಗೌಡರು, (3 ದೊಡ್ಡಬೋರೇಗೌಡರು ಮತ್ತು 4) ಸೋಮಶೇಖರರವರು ಬಂದು ಈ ರೈತ ಮುಖಂಡರ ಜೊತೆ ಈ ವಿಚಾರದ ಬಗ್ಗೆ ಚರ್ಚಿಸಬೇಕೆಂದು ತಿಳಿಸಿದರು. ಅವರ ಕೋರಿಕೆ ಪ್ರಕಾರ ದಿನಾಂಕ 3–8–83 ರಂದು 5–30ರ ಸಂಜೆಗೆ ಚರ್ಚೆ ಮಾಡಲು ಒಪ್ಪಿಕೊಳ್ಳಲಾಯಿತು.

ತಾ. 3–8–83 ರಂದು ರೈತ ನಾಯಕರ ಜೊತೆಗೆ ಚರ್ಚೆ ನಡೆಯಿತು. ಸರ್ಕಾರದ ಪರವಾಗಿ ನಾನು, ಕಂದಾಯ ಮಂತ್ರಿ ಶ್ರೀ ವಿ.ಎಲ್. ಪಾಟೀಲರು, ಸಹಕಾರ ಮಂತ್ರಿ ಶ್ರೀ ಆರ್.ಎಲ್. ಜಾಲಪ್ಪ ನವರು ಮತ್ತು ರೈತ ಮುಖಂಡರಾದ ಪ್ರೊ. ನಂಜುಂಡಸ್ವಾಮಿ, ಶ್ರೀ ಸುಂದರೇಶನ್ ಮತ್ತು ಸುಮಾರು 200 ಜನ ರೈತರು ಹಾಜರಿದ್ದರು. ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ನಾನು ಅಂದೇ ಮೈಸೂರ್ ಎಕ್ಸ್‌ಪ್ರೆಸ್ (ರಾತ್ರಿ 7–25ಕ್ಕೆ) ನಿಂದ ಹುಬ್ಬಳ್ಳಿಗೆ ಹೋಗಬೇಕಾಗಿದ್ದುದರಿಂದ ಆದಷ್ಟು ಚರ್ಚೆ ಮುಗಿಸುವ ಮನವಿ ಮಾಡಿದೆ. ಚರ್ಚೆ ಬಹಳ ಸೌಹಾರ್ದ ವಾತಾವರಣದಲ್ಲಿ ನಡೆಯಿತು. ಸರ್ಕಾರದ ಪರವಾಗಿ ನಾನು ಕಬ್ಬಿಗೆ ಮುಂಗಡ ಹಣ ಕೊಡುವ ಬಗ್ಗೆ ತೆಗೆದುಕೊಂಡ ನಿರ್ಣಯ ವಿವರಿಸಿ ಹೇಳಿದೆ. ಆಮೇಲೆ ರೈತನಾಯಕರು ಹೆಚ್ಚು ಬೆಲೆ ಕೊಡುವ ಬಗ್ಗೆ ಮತ್ತು ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ಬರುವ ಬಾಕಿಯ ಬಗ್ಗೆ ವಾದವನ್ನು ಮಂಡಿಸಿದರು. ಚರ್ಚೆ ಕೊನೆಗೆ ಪ್ರೊ. ನಂಜುಂಡಸ್ವಾಮಿಯವರು ರೈತರ ಪರವಾಗಿ 3 ಪ್ರಮುಖ ಬೇಡಿಕೆಗಳನ್ನು ಮುಂದೆ ಇಟ್ಟರು.

1) ಕಬ್ಬಿನ ಮುಂಗಡ ಬೆಲೆಯನ್ನು ಕನಿಷ್ಟ ಒಂದು ಟನ್‌ಗೆ 8.5 ಇಳುವರಿಗೆ 201 ರೂ. ಕೊಡುವುದು.
2) ಕಬ್ಬು ಖರೀದಿ ಸುಂಕ 17–60 ಪೂರ್ಣವಾಗಿ ರೈತರಿಗೆ ಕೊಡಬೇಕು.
3) ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾದ ನಿಗದಿ ಹಣವನ್ನು ನಿಗದಿ ಪಡಿಸುವ ದರದಲ್ಲೇ ಕೊಡುವಂತೆ ಆಜ್ಞೆ ಮಾಡಬೇಕು.

ಈ ಸಲಹೆಗಳ ಬಗ್ಗೆ ಕೂಡಲೇ ತೆಗೆದುಕೊಳ್ಳಬೇಕು.

ಆ ನಂತರ ಕೆಲವು ರೈತ ನಾಯಕರು ಈ ಸಭೆಯಲ್ಲೇ ನಿರ್ಣಯ ಕೊಡುವ ಬಗ್ಗೆ ಒತ್ತಾಯಿಸಿದರು ಮತ್ತು ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಮಾಲೀಕರು ಬಾಕಿ ಹಣವನ್ನು ರೈತರಿಗೆ ಕೊಡಲು ತಪ್ಪಿದ್ದರಿಂದ ಆ ಕಾರ್ಖಾನೆಯ ಮೇಲೆ ಉಗ್ರಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಸರ್ಕಾರವು ಈ ಬಗ್ಗೆ ಸಮಗ್ರವಾಗಿ ಆಲೋಚನೆ ಮಾಡಿ ಕಬ್ಬಿನ ಮುಂಗಡ ಹಣದ ನಿರ್ಣಯ ತೆಗೆದುಕೊಳ್ಳುವುದಾಗಿ ಮತ್ತು ಬಾಕಿ ಇರುವ ಹಣದ ವಿವರಗಳನ್ನು ಕೊಡಲು ತಿಳಿಸಿ ಹೇಳಿದೆನು. ಅಲ್ಲದೆ ಹಿಂದಿನ ಚರ್ಚೆಯ ವಿಚಾರಗಳನ್ನು ದಿನಾಂಕ 8–8–83ರಂದು ನಡೆಯುವ ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚಿಸಿ ಆ ನಂತರ ಪುನಃ ರೈತ ಪ್ರತಿನಿಧಿಗಳ ಜೊತೆಗೆ ಭೇಟಿ ಮಾಡುವುದಾಗಿಯೂ ತಿಳಿಸಿದೆನು. ರೈತರಿಗೆ ಬಾಕಿ ಇರುವ ಕಾರ್ಖಾನೆಗಳ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರೊ. ನಂಜುಂಡಸ್ವಾಮಿಯವರಿಗೆ ಈ ಸಭೆಯ ನಂತರ ಚರ್ಚಿಸುವುದಾಗಿ ತಿಳಿಸಿದೆನು. ಇಲ್ಲಿಗೆ ಚರ್ಚೆ ಮುಗಿಯಿತು. (7–15 ರಾತ್ರಿ.) ಆ ನಂತರ ನಾನು ಸಭೆಯಿಂದ ಹೊರಟು ನಿಂತಾಗ ಶ್ರೀ ನಾಗೇಗೌಡ, ಎಂ.ಎಲ್.ಸಿ. ಇವರು ಇನ್ನು ಕೆಲವು ವಿಷಯಗಳನ್ನು ತಿಳಿಸುವುದಿದೆ ಎಂದು ತಿಳಿಸಿದರು. ನಾನು ಹೆಚ್ಚಿನ ವಿಚಾರಗಳನ್ನು ನನ್ನ ಸಹದ್ಯೋಗಿ ಶ್ರೀ ವಿ. ಎಲ್. ಪಾಟೀಲ್‌ರವರಿಗೆ ತಿಳಿಸಬೇಕೆಂದು ಹೇಳಿ ಸಭೆಯಿಂದ ಹೋದೆನು. ಪ್ರೊ. ನಂಜುಂಡಸ್ವಾಮಿಯವರು ಕೂಡಾ ನನ್ನ ಜೊತೆಗೆ ಹೊರಗೆ ಬಂದು ಕಾನೂನು ವಿಚಾರವಾಗಿ ಸಲಹೆ ಮಾಡಿದರು. ಅವುಗಳ ಬಗ್ಗೆ ನಾನು ಮರಳಿ ಬಂದ ನಂತರ ಪುನಃ ಅವರೊಂದಿಗೆ ಚರ್ಚಿಸುವುದಾಗಿ ಹೇಳಿದ ನಂತರ ಅವರು ಹೋದರು. ಆ ನಂತರ ಶ್ರೀ ವಿ. ಎಲ್. ಪಾಟೀಲ್, ಕಂದಾಯ ಮಂತ್ರಿಯವರು ಸಭೆಯಲ್ಲಿ ಕೆಲವು ಸಮಯದವರೆಗೆ ಸಭೆಯಲ್ಲಿಯೇ ಇದ್ದರು. ಈ ರೀತಿ

ಚರ್ಚೆ ಸೌಹಾರ್ದವಾಗಿ ಮುಕ್ತಾಯವಾದ ಮೇಲೆ ರೈತರು ಹಟತ್ತಾಗಿ ಧರಣಿ ಮಾಡಿ ಸಭಾಂಗಣದಲ್ಲಿ ಕುಳಿತರು. ಧರಣಿಯನ್ನು ಹಿಂತೆಗೆದುಕೊಳ್ಳಲು ಮಾನ್ಯ ಜಾಲಪ್ಪನವರು ರಾತ್ರಿ 1 ಘಂಟೆಗೆ ರೈತ ನಾಯಕರ ಜೊತೆಗೆ ಕೇಳಿಕೊಂಡರು. ಮಂಡ್ಯದ ಶಾಸಕರೊಬ್ಬರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾದಾಗ, ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟು ರೈತರು ಧರಣಿಯನ್ನು ಬಿಟ್ಟು ಕೊಡಬೇಕು ಮತ್ತು 8-8-83ರಂದು ನಡೆಯುವ ಮಂತ್ರಿಮಂಡಲದ ಸಭೆಯಲ್ಲಿ ಚರ್ಚಿಸುವುದಾಗಿ ಭರವಸೆ ಕೊಟ್ಟರೂ ಕೂಡಾ ಧರಣಿಯನ್ನು ಮುಂದುವರೆಸಿದರು. ರೈತರ ಪ್ರತಿನಿಧಿಗಳಿಗೆ ಹೊರಗೆ ಹೋಗಲು ಯಾವುದೇ ನಿರ್ಭಂದನೆಯನ್ನು ಸರ್ಕಾರವು ಹಾಕಿರಲಿಲ್ಲ. ಊಟ, ತಿಂಡಿ ಮಾಡಲು ಕೂಡಾ ಅಡ್ಡಿ ಮಾಡಲಿಲ್ಲ. ಆದಾಗ್ಯೂ ರೈತ ಪ್ರತಿನಿಧಿಗಳು ವಿಧಾನಸೌಧದಲ್ಲಿಯೇ ಮಾತುಕತೆಗೆಂದು ಬಂದು ಈ ಕಾನೂನು ಬಾಹಿರವಾಗಿ ಪ್ರಜಾಪ್ರಭುತ್ವದ ರೀತಿ ನೀತಿಗೆ ವಿರುದ್ಧವಾಗಿ ಧರಣಿ ನಡೆಸಿದ್ದರಿಂದ ಭದ್ರತೆ ಮತ್ತು ಶಾಂತಿ ಪಾಲನೆ ದೃಷ್ಟಿಯಿಂದ ದಿನಾಂಕ 9-8 1983ರ ಬೆಳಿಗಿನ ಜಾವದಲ್ಲಿ ಪೋಲೀಸರು ರೈತ ಪ್ರತಿನಿಧಿಗಳನ್ನು ಬಂಧಿಸಿ ಆ ಮೇಲೆ ಬಿಡುಗಡೆ ಮಾಡಿದರು.

ಈ ಸರ್ಕಾರವು ರೈತರ ಹಿತ ರಕ್ಷಣೆಯಲ್ಲಿ ಯಾವುದೇ ಸರ್ಕಾರಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಸಕ್ರಿಯವಾಗಿ ಅಲ್ಪಾವಧಿಯಲ್ಲಿ ಎಷ್ಟೋ ಆರ್ಥಿಕ ಮುಗ್ಗಟ್ಟಿದ್ದರೂ, ರಾಜ್ಯದ ಕಬ್ಬು ಬೆಳೆಗಾರರ ಮತ್ತು ರಾಜ್ಯದ ಎಲ್ಲ ಬೇರೆ ಬೆಳೆಗಾರರಾದ ಜೋಳ, ರಾಗಿ, ಭತ್ತ, ಹತ್ತಿ, ತಂಬಾಕು ಹಾಗೂ ರೇಷ್ಮೆ ಮುಂತಾದ ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದೆ ಮತ್ತು ಪ್ರಯತ್ನ ಮಾಡುತ್ತದೆ

ದಿನಾಂಕ 8-8-1983 ಮಂತ್ರಿಮಂಡಲದ ಸಭೆಯ ನಂತರ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಈಗ ನಾವು ಕೂಡ ಮಾಡಿದ ದರ ಒಪ್ಪಿಗೆ ಆಗದಿದ್ದರೆ ಆಂಧ್ರಪ್ರದೇಶ, ತಮಿಳು ನಾಡು, ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇರುವ ರೀತಿಯಲ್ಲಿ ಯಾವುದಾದರೂ ಒಂದನ್ನು ಕಬ್ಬು ಬೆಳೆಗಾರರಿಗೆ ಕೊಡಲು ಒಪ್ಪಿಕೊಂಡಿದ್ದಾರೆ. ರೈತ ನಾಯಕರು ಈ ಸಲಹೆಯನ್ನು ಒಪ್ಪಿಕೊಂಡು ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಕೋರುತ್ತೇನೆ. ಸಂಧಾನದ ಮಾತುಕತೆ ಬಗ್ಗೆ ಸರ್ಕಾರದ ಬಾಗಿಲು ಸದಾ ತೆಗೆದಿರುತ್ತದೆ ಎಂದು ಕರ್ನಾಟಕದ ಎಲ್ಲಾ ರೈತರಿಗೂ, ರೈತ ಮುಖಂಡರಿಗೂ ಈ ಮೂಲಕ ವಿನಂತಿಸುತ್ತೇನೆ. ರೈತರ ಅದರಲ್ಲೂ ಚಿಕ್ಕ ರೈತರ ಹಿತದೃಷ್ಟಿಯಿಂದ ಚಳುವಳಿಯು ಸಾಧುವಾದುದಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಕಬ್ಬು ಅರೆಯುವುದನ್ನು ಕೂಡಲೇ ಪ್ರಾರಂಭ ಮಾಡದಿದ್ದಲ್ಲಿ, ಕಬ್ಬು ಒಣಗಿ ರೈತರಿಗೆ ತುಂಬಲಾರದ ಹಾನಿಯಾಗುತ್ತದೆ. ಇದರ ಬಗ್ಗೆ ಕಾನೂನು ವಿಚಾರವಾಗಿ ಒಂದೆರಡು ವಿವರಣೆಗಳನ್ನು ಕೊಡಬಯಸುತ್ತೇನೆ. ಇಲ್ಲಿ ಒಂದು ಅಭಿಪ್ರಾಯ ವ್ಯಕ್ತವಾಗಿದೆ. ಅದೇನೆಂದರೆ, ಕಬ್ಬಿನ ಬೆಲೆಯನ್ನು ನಿಗದಿ ಮಾಡತಕ್ಕ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎನ್ನುವ ಮಾತನ್ನು ಕೆಲವು ಮಂದಿ ಶಾಸಕರು ಹೇಳಿದ್ದಾರೆ. ನನ್ನ ನೆನಪಿನ ಮಟ್ಟಿಗೆ ಪತ್ರಿಕಾ ಪ್ರಕಟಣೆಯನ್ನು ನೋಡಿದಾಗ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆಂದು ವ್ಯಕ್ತವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಜಾಸ್ತಿ ಕೊಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ, ಇಲ್ಲ. ಕಬ್ಬಿನ ಬೆಲೆ ಬಗ್ಗೆ ರಾಜ್ಯ ಸರ್ಕಾರಕ್ಕೆ ಏನು ಅಧಿಕಾರ ಇದೆ ಎಂಬುದಕ್ಕೆ 1966ರ ಷುಗರ್ ಕಂಟ್ರೋಲ್ ಆರ್ಡರಿನ ಕ್ಲಾಜ್-3ನ್ನು ಓದಬಯಸುತ್ತೇನೆ:

"Minimum Price of sugarcane payable by producer of Sugar:

(1) The Central Government may, after consultation with such authorities, bodies, or associations as it may deem fit, by notification in the Offical Gazette, from time time, fix the minimum price of sugarcane to be paid by producers of sugar or their agents for the sugarcane purchased by them having regard to –

(a) the cost of production of sugarcane ;

(b) the return to the grower from alternative crops and the general trend of price of agricultural commodities ;

(c) the availability of sugar to the consumer at a fair price ;

(d) the price at which sugar produced from sugarcane is sold by producer of sugar and

(e) the recovery of sugar from sugarcane ;

Provided that the Central Government or, with the approval

of the Central Govt. the State Government may, in such circumstances and subject to such conditions as it may specify, allow a suitable rebate in the price so fixed. The provision does not prevent to give extra.

ಶ್ರೀ ವೈ. ರಾಮಕೃಷ್ಣ.—ಮಿನಿಮಂ ಪ್ರೈಸ್.....

ಶ್ರೀ ಎಸ್. ಆರ್. ಬೊಮ್ಮಾಯಿ.—ಪೂರಾ ಕೇಳಿ. ಹೆಚ್ಚು ಕೊಡುವಾಗ ಏನು ಮಾಡಬೇಕೆಂದು ಇದೆ, ಅದನ್ನು ಓದುತ್ತೇನೆ.

"5 Additional price for sugarcane purchased–(8) Where a producer of sugar of his agent purchases any sugarcane from a grower of sugarcane or a growers' co-operative society during each of the four successive years beginning on the 1st day of November, 1958, the producer shall, in addition to the minimum price of sugarcane fixed under sub-clause (1) of clause 3, pay to the grower or the co-operative society, as case may be, an additional price, if found due in accordance with the provision of the Frist Schedule hereto annexed."

ಶ್ರೀ ಕೆ. ಹೆಚ್. ರಂಗನಾಥ್.—ಹಿಂದೆ, ಅಂದರೆ, 1974-75ರಲ್ಲಿ ಸಂಕೇಶ್ವರದಲ್ಲಿ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅದನ್ನು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಸಕ್ಕರೆ ಕಾರ್ಖಾನೆಗಳಿಗೆ ಲಾಭದಾಯಕವಾಗಿ ಕೆಲಸ ಮಾಡಿ ಲಾಭ ಸಂಪಾದನೆ ಮಾಡಿ ರೈತರಿಗೆ ಸಾಕಷ್ಟು ಬೆಲೆ ಕೊಡಿ ಎಂದು ಹೇಳಿ. ಅದನ್ನು ಬಿಟ್ಟು ಕಾನೂನನ್ನು ಹೇಳುತ್ತಾ ಕುಳಿತರೆ ಏನು ಪ್ರಯೋಜನ ? ಸಕ್ಕರೆ ಕಂಪನಿಗಳಲ್ಲಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಯಾರೂ ಕೂಡ ಇಷ್ಟು ಇಳುವರಿ ಬಂದಿದೆ ಎಂದು ಹೇಳುವುದಿಲ್ಲ. ಇದೆಲ್ಲ ಮಾಮೂಲಿಯಾಗಿ ಇದ್ದೇ ಇದೆ. ಇದನ್ನೆಲ್ಲ ತಾವು ಮೊದಲು ಅಭ್ಯಾಸ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅಭ್ಯಾಸ ಮಾಡಿಯೇ ಹೇಳುತ್ತಿದ್ದೇನೆ. ನಾನು ಪೂರ್ತಿ ಉತ್ತರ ಹೇಳಿದ ಮೇಲೆ ನೀವು ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್.—ನಿಮ್ಮಿಂದ ನಾವು ಬಹಳ ನಿರೀಕ್ಷೆ ಮಾಡಿದ್ದೆವು. ಏತಕ್ಕೆಂದರೆ ನೀವು ಇಲ್ಲಿ ಕುಳಿತು ಅವರ ಪರವಾಗಿ ದಿನಾ ಕೇಳುತ್ತಿದ್ದೀರಿ. ಅಲ್ಲಿ ಕುಳಿತ ಮೇಲೆ ಈಗ ಉಲ್ಟಾ ಹೊಡೆಯುತ್ತಿದ್ದೀರಲ್ಲ. ಏನು ಸಮಾಚಾರ ?

ಶ್ರೀ ಆರ್. ಎಲ್. ಜಾಲಪ್ಪ.—ತಾವು ಇಲ್ಲಿ ಕುಳಿತಿರುವಾಗ ಸುಮ್ಮನಿದ್ದು ಈಗ ಅಲ್ಲಿ ಉಲ್ಟಾ ಹೊಡೆಯುತ್ತಿದ್ದೀರಲ್ಲ.

ಶ್ರೀ ಎಂ. ಸೂರ್ಯನಾರಾಯಣರಾವ್.—ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ರೈತರಿಗೆ ಬೆಲೆ ಜಾಸ್ತಿ ಕೊಡೋಣ.

ಶ್ರೀ ಕೆ. ಹೆಚ್. ರಂಗನಾಥ್.—ತಮಗೆ ಕಬ್ಬೂ ಗೊತ್ತಿಲ್ಲ, ಇಳುವರಿಯೂ ಗೊತ್ತಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಪೂರ್ತಿ ಉತ್ತರ ಹೇಳಲಿ.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಲ್ಲ, ಅದನ್ನು ಕೇಳಿದರೆ ಏನು ಪ್ರಯೋಜನ ? ಮಿನಿಮಂ ಪ್ರೈಸ್ ಫಿಕ್ಸ್ ಮಾಡಿ ಕೈಬಿಡುವಹಾಗಿದ್ದರೆ ಬಿಟ್ಟು ಬಿಡಿ.

ಅಧ್ಯಕ್ಷರು.—ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಕೆ. ಹೆಚ್. ರಂಗನಾಥ್.—ಅದಲ್ಲ ಪ್ರಶ್ನೆ

ಅಧ್ಯಕ್ಷರು.—ಏನು ಹೇಳುತ್ತಾರೋ ನೋಡೋಣ ತಾಳಿ.

ಶ್ರೀ ಕೆ. ಹೆಚ್ ರಂಗನಾಥ್.—ಹೇಳುವುದೇನಿದೆ ? ಮುಖ ನೋಡಿದರೆ ಹನುಮಂತರಾಯ, ಬಾಲ ಬೇರೆ ಮುಟ್ಟಿ ನೋಡಬೇಕೆ ?

ಶ್ರೀ ಜೆ. ಡಿ. ಸೋಮಪ್ಪ.—ರೈತರ ಬಗ್ಗೆ ಅಧ್ಯಕ್ಷರು ಕಾನೂನನ್ನು ಸ್ವಲ್ಪ ಸಡಿಲ ಮಾಡಿ. ಎಲ್ಲರಿಗೂ ಒಂದೇ ಕಾನೂನು ಬೇಡ. ಮಾನ್ಯ ಸದಸ್ಯರು ಸಂಕೇಶ್ವರದ ಬಗ್ಗೆ ವಿವರಣೆ ಕೇಳಿದರು.

ಶ್ರೀ ಕೆ. ಹೆಚ್. ರಂಗನಾಥ್. 1974ರಲ್ಲಿ ಸಂಕೇಶ್ವರದಲ್ಲಿ ಎಷ್ಟು ಕೊಟ್ಟಿದ್ದಾರೆ, 1975 ಮತ್ತು 76ರಲ್ಲಿ ಎಷ್ಟು ಕೊಟ್ಟಿದ್ದಾರೆ, ಏತಕ್ಕೆ ಕೊಟ್ಟಿದ್ದಾರೆ ಎಂಬುದನ್ನು ನೋಡಿ. ತಾವು ಸ್ವಲ್ಪ ಸ್ಟಡಿ ಮಾಡಿ.

ಶ್ರೀ ಕೆ. ಜಿ. ಮಹದೇಶ್ವರಪ್ಪ.—ತಾವು ಸ್ಟಡಿ ಮಾಡಿ

ಶ್ರೀ ಕೆ. ಹೆಚ್. ರಂಗನಾಥ್.—ನಾನು ಮಾಡಿದ್ದೇನೆ. ನಿಮ್ಮ ಎರಡು ಫ್ಯಾಕ್ಟರಿಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಹೇಳಿ. ಎಲ್ಲಿ ಬೇಕಾದರೂ ಮಾರಲಿಕ್ಕೆ ಹೇಳಿಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಉತ್ತರ ಪೂರ್ತಿ ಹೇಳಿದ ಮೇಲೆ ತಾವು ಹೇಳಿ. ಷೆಡ್ಯೂಲ್ 2ರಲ್ಲಿ ಹೆಚ್ಚಿಗೆ ಬೆಲೆಯನ್ನು ಯಾವಾಗ ಕೊಡಬೇಕು ಮತ್ತು ಯಾವ ರೀತಿ ಕೊಡಬೇಕು ಎಂಬುದನ್ನು ಕೊಟ್ಟಿದೆ. ಅದನ್ನು ಈಗ ನಾನು ಹೇಳುವ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರದವರೇ ಎಲ್ಲ ಹೇಳಿದ್ದಾರೆ. ಆದ್ದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. 16-11-82ರಲ್ಲಿ ಅವರು ಒಂದು ಆಜ್ಞೆ ಹೊರಡಿಸಿದ್ದಾರೆ. ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗೂ ಸಕ್ಕರೆ ವರ್ಷ ಎಂದು ಅವರು ಹೇಳಿದ್ದಾರೆ. ನಮ್ಮಲ್ಲಿ ಕೆಲವು ಕಡೆ ಜೂನ್ ಜುಲೈನಲ್ಲಿ ಆಗುತ್ತವೆ. ಅವರು 130 ರೂಪಾಯಿ ಬೆಲೆ ನಿಗದಿ ಮಾಡಿದ್ದಾರೆ. ಅಲ್ಲದೆ ಕರ್ನಾಟಕದ ಪ್ರತಿಯೊಂದು ಕಾರ್ಖಾನೆಯವರು ಎಷ್ಟೆಷ್ಟು ಕೊಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರದವರಿಂದ ಆಜ್ಞೆ ಹೊರಟಿದೆ. ಇಳುವರಿ ಪ್ರಮಾಣದ ಮೇಲೆ ಪ್ರತಿ ಕಾರ್ಖಾನೆಯವರು ಎಷ್ಟೆಷ್ಟು ಕೊಡಬೇಕು, ಬೀದರ್ ಸಕ್ಕರೆ ಕಾರ್ಖಾನೆಯವರು ಎಷ್ಟು ಕೊಡಬೇಕು, ಮಂಡ್ಯದವರು ಎಷ್ಟು ಕೊಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರದವರ ಆಜ್ಞೆ ಇದೆ.

ಶ್ರೀ ಎಂ. ಸೂರ್ಯನಾರಾಯಣರಾವ್.—ಅದನ್ನು ಓದಿ ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ರೈತರಿಗೆ ಕೊಡುವುದಕ್ಕೆ ಮನಸ್ಸಿಲ್ಲ ಎಂದು ಇದನ್ನೆಲ್ಲಾ ಹೇಳುತ್ತಿದ್ದಾರೆ ಸೂರ್ಯನಾರಾಯಣರಾಯರಿಗೆ ಏತಕ್ಕೆ ಆತುರ ?

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದು ಬೇಡವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸೂರ್ಯನಾರಾಯಣರಾವ್ ಅವರ ಆಧಾರದಿಂದ ತಾವು ಅಲ್ಲಿ ಇರುವುದಾದರೆ...

ಶ್ರೀ ವಿ. ಎಸ್. ಆಚಾರ್.—ಅವರು ಕಾನೂನು ಬಹಳ ಹೇಳುತ್ತಿದ್ದರು. ಕಾನೂನು ಪ್ರಕಾರ ಶೋಷಣೆಯೇ ಇದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಗೊತ್ತಿರುವ ವಿಷಯವನ್ನು ಈ ಮನೆಯ ಗಮನಕ್ಕೆ ತರುವುದು ನನ್ನ ಕರ್ತವ್ಯ. ಆದ್ದರಿಂದ ಹೇಳುತ್ತಿದ್ದೇನೆ. ಪ್ರತಿಯೊಂದು ಕಾರ್ಖಾನೆಯವರು ಎಷ್ಟೆಷ್ಟು ಹಣ ಕೊಡಬೇಕು ಎಂಬುದನ್ನು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಅದನ್ನು ನಾನು ಈ ಮನೆಯ ಗಮನಕ್ಕೆ ತರುತ್ತಿದ್ದೇನೆ. ಆ ಆಜ್ಞೆ ಆಧಾರದ ಮೇಲೆಯೇ ರೈತರಿಗೆ ಹಣ ಕೊಟ್ಟರೆ ಅವರು ಕಬ್ಬು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ನಿರ್ಣಯವನ್ನೇ ನಾವು ಆಧಾರವಾಗಿಟ್ಟು ಕೊಂಡರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಅದನ್ನು ಮನಗಂಡು ನಮ್ಮ ಸರ್ಕಾರದವರು ರೈತರ ಜೊತೆ ಮಾತು ಕತೆ ಮಾಡಿದ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಎಲ್ಲ ಸಕ್ಕರೆ ಕಾರ್ಖಾನೆಗಳೂ ಸರಿಯಾಗಿ ನಡೆಯುತ್ತಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. 8-10 ವರ್ಷಗಳಿಂದ ಈ ಕಾರ್ಖಾನೆಗಳ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಸಂಪೂರ್ಣವಾಗಿ ಹಾನಿಯಾಗಿದೆ. ಅನೇಕ ಕಾರ್ಖಾನೆಗಳ ಅವ್ಯವಹಾರಗಳಿಂದ ರೈತರ ಹಿತಾಸಕ್ತಿಗೆ ಧಕ್ಕೆಯುಂಟಾಗಿದೆ ಹಿಂದಿನ ಸರ್ಕಾರ ಈ ಬಗ್ಗೆ ಉಗ್ರ ಕ್ರಮ ಕೈಗೊಂಡಿದ್ದರೆ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಮತ್ತು ರೈತರ ಪರಿಸ್ಥಿತಿ ಈ ರೀತಿ ಇರುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ನಿಮ್ಮ ಸದಸ್ಯರು ಮೇಜಿಗೆ ಬಡಿಯುತ್ತಿದ್ದಾರೆ ರೈತರು ನಿಮ್ಮ ಬೆನ್ನಿಗೆ ಬಡಿಯುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ರೈತರು ನಿಮ್ಮ ತಲೆಗೆ ಬಡಿದು ಕೂರಿಸಿದ್ದಾರಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ಅಕ್ಷರಶಃ ನಿಜ. ರೈತರು ನಮ್ಮ ಬೆನ್ನು ತಟ್ಟುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—2-10 ವರ್ಷಗಳಿಂದ ಸಕ್ಕರೆ ಕಾರ್ಖಾನೆಗಳು ಹಾನಿಯಲ್ಲಿ ಕೆಲಸ ಮಾಡುತ್ತಿವೆ. ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ಉಳಿಸಿಕೊಂಡಿದ್ದಾರೆ ಕೆಲವು ಕಾರ್ಖಾನೆಗಳು ರೈತರ ಸುಲಿಗೆ ಮಾಡಿವೆ. ಕೆಲವು ಉತ್ತಮವಾಗಿ ಕೆಲಸ ಮಾಡಿವೆ. ಉದಾಹರಣೆಗೆ ಸಂಕೇಶ್ವರ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆ...

ಶ್ರೀ ಎಂ. ಎಸ್. ಪಾಟೀಲ್.—ಸಂಕೇಶ್ವರ ಕಾರ್ಖಾನೆ ಬಗ್ಗೆ ತಾವು ಪ್ರಸ್ತಾಪ ಮಾಡುವುದಾದರೆ ನಾವೂ ಆ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡಿವೆ. ಚೆನ್ನಾಗಿ ಕೆಲಸ ಮಾಡಿ ರೈತರಿಗೆ ಹೆಚ್ಚು ಲಾಭದಾಯಕವಾದ ಬೆಲೆಗಳನ್ನು ಕೊಟ್ಟಿದ್ದಾರೆ. ಖರ್ಚನ್ನು ಕಡಿಮೆ ಮಾಡಿ ಕೆಲಸ ಚೆನ್ನಾಗಿ ಮಾಡಿ ಶಿಸ್ತಿನಿಂದ ನಡೆದುಕೊಂಡರೆ ರೈತರಿಗೆ ಇನ್ನೂ ಹೆಚ್ಚಿನ ಬೆಲೆ ಕೊಡುವುದಕ್ಕೆ ಸಾಧ್ಯವಿದೆ. ಈಗಾಗಲೇ ಕಾರ್ಖಾನೆಗಳ ಆಡಳಿತದ ಬಗ್ಗೆ ಮತ್ತು ನಡೆದಂಥ ಅವ್ಯವಹಾರಗಳ ಬಗ್ಗೆ ಪ್ರಾರಂಭವಾಗಿದೆ. ಕೆಲವು ಕಡೆ ತನಿಖೆ ಹಂತದಲ್ಲಿದೆ. ಯಾವ ರೀತಿ ವ್ಯವಸ್ಥೆಯನ್ನು ಬಿಗಿಗೊಳಿಸಬೇಕು ಸೋರಿ ಹೋಗುವುದನ್ನು ಎಲ್ಲಿ ತಡೆಗಟ್ಟಬೇಕು, ರೈತರಿಗೆ ಯಾವ ರೀತಿ ಹೆಚ್ಚಿನ ಬೆಲೆ ಕೊಡಿಸಬೇಕು ಎಂಬುದನ್ನು ನೋಡುತ್ತಿದ್ದೇವೆ. ಭಾಗೀದಾರರಾಗಿರುವ ರೈತರಿಗೆ ಡಿವಿಡೆಂಡ್ ಕೊಡುವ ವ್ಯವಸ್ಥೆ ಮಾಡುವುದು ಅವಶ್ಯಕ. ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ. ಸಕ್ಕರೆ ಕಾರ್ಖಾನೆಯವರ

ಜೊತೆ ಚರ್ಚೆ ಮಾಡಿದಾಗ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ರೈತರಿಗೆ ಕೊಡತಕ್ಕ ಬಾಕಿ ಹಣವನ್ನು ಬೇಗನೆ ಮರುಪಾವತಿ ಮಾಡಬೇಕು, ನಿರ್ದಿಷ್ಟ ಸಮಯದಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ನಾವು ಒತ್ತಾಯ ಮಾಡಿ ಆ ರೀತಿ ಕೇಳಿದಾಗ ನಮ್ಮ ಸಕ್ಕರೆ ಕಾರ್ಖಾನೆಯಲ್ಲಿರತಕ್ಕ ಸಕ್ಕರೆ ಬಿಡುಗಡೆ ಮಾಡದೇ ನಮಗೆ ಹಣ ಬರುವುದಿಲ್ಲ, ರಾಜ್ಯದಲ್ಲಿ ಇವತ್ತು ಎಲ್ಲ ಸಕ್ಕರೆ ಕಾರ್ಖಾನೆಗಳಲ್ಲಿ 7 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ, ಲೆವಿ ಸಕ್ಕರೆ ಕೂಡ ಇದೆ, ಕೇಂದ್ರ ಸರ್ಕಾರದವರು ಲೆವಿ ಸಕ್ಕರೆಯನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಬೇಕು, ಮುಕ್ತ ಮಾರುಕಟ್ಟೆಯ ಸಕ್ಕರೆಯನ್ನು ಕೂಡ ಕೇಂದ್ರ ಸರ್ಕಾರ ಬಿಡುಗಡೆ ಮಾಡಬೇಕು, ಇಲ್ಲದೆ ಹೋದರೆ ರೈತರಿಗೆ ಹಣ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಬೇಗನೆ ಸಕ್ಕರೆ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುವುದಕ್ಕೆ ಒತ್ತಾಯ ಮಾಡಿದ್ದಾರೆ. ಕೆಲವು ಸಕ್ಕರೆ ಕಾರ್ಖಾನೆಗಳು ರೈತರಿಗೆ ಹಣ ಕೊಡತಕ್ಕ ಆರ್ಥಿಕಮಟ್ಟವನ್ನು ಹೊಂದಿವೆ. ಆದರೂ ರೈತರಿಗೆ ಹಣ ಕೊಟ್ಟಿಲ್ಲ. ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಕಾನೂನು ಪ್ರಕಾರ ವಿಚಾರ ಮಾಡುತ್ತಿದ್ದೇವೆ. ಕೆಲವು ಕಾರ್ಖಾನೆಗಳನ್ನು ಸರ್ಕಾರ ತೆಗೆದುಕೊಳ್ಳಬಹುದು ಎಂಬ ಸಲಹೆಯನ್ನು ರೈತ ಮುಖಂಡರು ಕೊಟ್ಟಿರು. ಆ ಸಲಹೆ ಬಗ್ಗೆ ಕೂಡ ಆಲೋಚನೆ ಮಾಡುತ್ತಿದ್ದೇವೆ. ಅದನ್ನು ತೆಗೆದುಕೊಳ್ಳುವ ಅಧಿಕಾರ ಇವತ್ತು ಕೇಂದ್ರ ಸರ್ಕಾರಕ್ಕೆ ಇದೆ. ಯಾವಾಗ ಯಾವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಕೂಡ ಕಾನೂನಿನಲ್ಲಿ ಹೇಳಲಾಗಿದೆ. ಸ್ಪಷ್ಟವಾಗಿ ಅದರ ಬಗ್ಗೆ ಹೇಳಿದ್ದಾರೆ.

Vesting of Management of a Sugar Undertaking in Central Government :–

Where the Central Government is satisfied :

(a) That any Sugar undertaking has in any year failed to commence the manufacture of Sugar on or before the appointed day in respect of that year or having started the manufacture of Sugar on or before that day ceases to manufacture Sugar before the expiry of the average period of manufacture of Sugar in relation to that undertaking ; or

(b) That on any date in any Sugar Undertaking as in relation to the Cane purchased before that date for the purpose of the undertaking, arrears of cane dues to the extent of more than 10% of the total price of the cane purchased for the purpose of the undertaking during the immediately preceding Sugar year.

ಈ ಎರಡು ಸಂದರ್ಭಗಳಲ್ಲಿ ತೆಗೆದುಕೊಳ್ಳಬಹುದು. ಅವರು ಒಂದು ದಿನಾಂಕದ ದಿವಸದಂದು ಕಬ್ಬನ್ನು ಅರೆಯುವುದಕ್ಕೆ ಪ್ರಯತ್ನವನ್ನು ಮಾಡದೇ ಇದ್ದಲ್ಲಿ, ನಿಗಧಿಪಡಿಸಿದ ಬೆಲೆಯನ್ನು ಕೊಡದೇ ಇದ್ದರೆ, ಇವತ್ತು ಕಾನೂನು ದೃಷ್ಟಿಯಿಂದ ನೋಡಿದಾಗ ನಿಗಧಿಪಡಿಸಿದ ಬೆಲೆ ಎಂದರೆ ಕೇಂದ್ರ ಸರ್ಕಾರ by notification under the Sugar Control Order ಏನು ಮಾಡುತ್ತದೆಯೋ ಅದು ಆಗುತ್ತದೆ. ಹಿಂದೆ ಉತ್ತರ ಪ್ರದೇಶದಲ್ಲಿಯೂ ಕೂಡಾ ಆರ್ಡಿನೆನ್ಸ್ ಆಗಿದೆ. ಸುಪ್ರೀಮ್ ಕೋರ್ಟಿನಲ್ಲೂ ಕೂಡ ನಿರ್ಣಯ ಆಗಿದೆ. ಆದ್ದರಿಂದ ಸರ್ಕಾರದ ಸ್ಪಷ್ಟ ನಿಲುವನ್ನು ಹೇಳುತ್ತೇನೆ. ಯಾವುದೇ ಕಾರ್ಖಾನೆಯವರು ಆರ್ಥಿಕವಾಗಿ ರೈತರ ಹಣವನ್ನು ಕೊಡಲು ಶಕ್ತಿ ಇದ್ದೂ ಕೂಡ ರೈತರಿಗೆ ಹಣವನ್ನು ನಿಗದಿಯಾದ ಸಮಯದಲ್ಲಿ ಕೊಡದೇ ಇದ್ದರೆ ಕಾನೂನು ಪ್ರಕಾರ ರಾಜ್ಯ ಸರ್ಕಾರ ತನಗೆ ಬರುವ ವ್ಯಾಪ್ತಿಯ ಅಧಿಕಾರವನ್ನು ಉಪಯೋಗಿಸಿ ಕೆಲಸ ಮಾಡುತ್ತದೆ. ಈ ಬಗ್ಗೆ ಸರ್ಕಾರೀ ಕಾನೂನು ಪ್ರಕಾರ ಒಂದು ಆರ್ಡಿನೆನ್ಸ್, ಅಥವಾ ಒಂದು ಮಸೂದೆಯನ್ನು ತರುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಈ ಪ್ರಶ್ನೆಯನ್ನು ಅಧ್ಯಯನ ಮಾಡುತ್ತಿದ್ದೇವೆ. ರೈತರಿಗೆ ಕೊಡಬೇಕಾದ ಬಾಕಿ, ಕಳೆದ 3 ವರ್ಷಗಳಿಂದ ಉಳಿದಿದೆ. ಕಬ್ಬು ಬಂದು ಸಕ್ಕರೆಯಾಗಿ ಮಾರಾಟವಾದ ಮೇಲೂ ಕಬ್ಬಿನ ಬೆಲೆ ಸಿಕ್ಕಿಲ್ಲ ವೆಂದರೆ ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಆದರೆ ಕಾನೂನು ಪ್ರಕಾರ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಆಲೋಚನೆ ಮಾಡುತ್ತಿದ್ದೇವೆಂದು ಭರವಸೆ ಕೊಡುತ್ತೇವೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ, so far as arrears are concerned. ಸರ್ಕಾರ ಅಧ್ಯಯನ ಮಾಡಿದ ಪ್ರಕಾರ ಆಂಧ್ರ ಪ್ರದೇಶದಲ್ಲಿರತಕ್ಕ ಒಂದು ವ್ಯವಸ್ಥೆ ಗಿಂತಾ, ಮಹಾರಾಷ್ಟ್ರ, ತಮಿಳುನಾಡಿನಲ್ಲಿರತಕ್ಕ ವ್ಯವಸ್ಥೆ ಗಿಂತಾ ನಮ್ಮದು ಲಾಭದಾಯಕ

ವಾಗಿದೆ. ಈ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಏನು ಇವತ್ತು ನಿಗದಿ ಮಾಡಿದ ಕನಿಷ್ಟ ಬೆಲೆ ಮತ್ತು 5.60 ಪೈಸೆ ಪರ್ಚೇಸ್ ಟ್ಯಾಕ್ಸ್ ಕೊಡುವುದು ನ್ಯಾಯವಲ್ಲವೆಂದು ಹೇಳುವುದಾದರೆ, ಮಹಾರಾಷ್ಟ್ರದಲ್ಲಿ ಇರುವುದನ್ನು ಒಪ್ಪಿಕೊಳ್ಳಲಿ. ಅಥವಾ ಆಂಧ್ರ, ತಮಿಳುನಾಡಿಲ್ಲಿರುವುದನ್ನು ಒಪ್ಪಿಕೊಳ್ಳಲಿ. ಈ 3 ರಾಜ್ಯಗಳಲ್ಲಿನ ಯಾವುದೇ ಒಂದು ರಾಜ್ಯದಲ್ಲಿ ಇರುವುದನ್ನು ಅವರು ಒಪ್ಪಿಕೊಂಡರೆ ಅದನ್ನು ನಾವು ಜಾರಿಗೆ ಕೊಡುವುದಕ್ಕೆ ತಯಾರು ಇದ್ದೇವೆ. ಇದು ಬರೀ ಕಬ್ಬು ಬೆಳೆಗಾರರ ಪ್ರಶ್ನೆಯಲ್ಲ. ಇವತ್ತು ಹತ್ತಿ ಬೆಳೆಗಾರರಿದ್ದಾರೆ, ಸುಮಾರು 60 ಸಾವಿರ ಎಕರೆಗಳಲ್ಲಿ ಹತ್ತಿ ಬೀಜ ಹಾಕಿದ್ದು ಇನ್ನೂ ಉತ್ತಿಲ್ಲ. ತಂಬಾಕು ಬೆಳೆಗಾರರು ಬೆಳೆದ ತಂಬಾಕು ಮಾರಾಟವಾಗುತ್ತಿಲ್ಲ. ಇವತ್ತು ಭತ್ತ ಬೆಳೆಯುವವರ ಪ್ರಶ್ನೆ ಇದೆ. ಜೋಳ ಬೆಳೆಯುವವರ ಪ್ರಶ್ನೆ ಇದೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಕಬ್ಬು ಬೆಳೆಗಾರರ ಹಿತರಕ್ಷಣೆ ಮಾಡುವುದಕ್ಕೆ ಧರಣಿ ಮಾಡುವುದು ಅವಶ್ಯವಿರಲಿಲ್ಲ. ಅದೂ ವಿಧಾನ ಸೌಧದಲ್ಲಿ ಮಾತುಕತೆಗೆ ಕುಳಿತುಕೊಂಡು ಚರ್ಚೆ ಮುಕ್ತಾಯದ ಹಂತಕ್ಕೆ ಬಂದಾಗ ಧರಣಿ ಕುಳಿತರೆ ಸಚಿವಾಲಯದ ಒಂದು ಭದ್ರತೆಯ ದೃಷ್ಟಿಯಿಂದ ಸರ್ಕಾರ ತನ್ನ ಕರ್ತವ್ಯವನ್ನು ಮಾಡಲೇ ಬೇಕಾಗುತ್ತದೆ. ನಾವು ಧರಣಿ ಮಾಡುವವರಿಗೆ ನಾವು 8ನೇ ತಾರೀಖು ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚೆ ಮಾಡುತ್ತೇವೆಂದೂ, 9ನೇ ತಾರೀಖು ಪುನಃ ನಿಮ್ಮನ್ನು ಭೇಟಿ ಮಾಡುತ್ತೇವೆಂದು ಹೇಳಿದರೂ ಅವರು ಆ ರೀತಿ ಧರಣಿ ಮಾಡುವುದು ಸರಿಯೇ ? ಸರ್ಕಾರ ಇವರ ಜೊತೆ ಮಾತುಕತೆ ಮಾಡುವುದಕ್ಕೆ ಯಾವಾಗಲೂ ಸಿದ್ಧವಿದೆ. ರೈತನಾಯಕರಲ್ಲಿ ಅನೇಕರು ನಮ್ಮ ನೀತಿಯನ್ನು ಸ್ವಾಗತಿಸಿದ್ದಾರೆ. ಹೋದ ಸಲ ಸರ್ಕಾರ ನಿರ್ಣಯ ಮಾಡಿದ ಮೇಲೆ ಕೆಲವು ಕಾರ್ಖಾನೆಯವರು ಹಣವನ್ನು ಕೊಟ್ಟಿದ್ದಾರೆ. ಆದರೆ ಬೇರೆ ಕೆಲವು ಕಾರ್ಖಾನೆಯವರು ಕನಿಷ್ಟ ಬೆಲೆಯನ್ನೂ ಸಹಾ ಕೊಟ್ಟಿಲ್ಲ. ಮಾಂಡ್ಯ ಮತ್ತು ಪಾಂಡವಪುರದವರು ಹಣವನ್ನು ಕೊಟ್ಟಿದ್ದಾರೆ. ಉಳಿದ ಕಾರ್ಖಾನೆಯವರು ಕೊಟ್ಟಿಲ್ಲ. ನಾವು ನಿರ್ಣಯ ತೆಗೆದುಕೊಂಡ ಪ್ರಕಾರ ರೈತರಿಗೆ ನಿಗದಿಪಡಿಸಿದ ಬೆಲೆಯನ್ನು ಕೊಡಲೇ ಬೇಕಾಗುತ್ತದೆ. ರೈತರ ಹಿತರಕ್ಷಣೆಯ ಬಗ್ಗೆ ಒಳ್ಳೆಯ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಇವತ್ತು ಕಬ್ಬು ಅರೆಯುವುದನ್ನು ನಿಲ್ಲಿಸಿದರೆ ಇಳುವರಿ ಕಡಿಮೆಯಾಗಿ ಎಲ್ಲರೂ ಕಷ್ಟಕ್ಕೆ ಸಿಲುಕುತ್ತಾರೆ. ಆದುದರಿಂದ ಸರ್ಕಾರದ ಸೂಚನೆಗಳನ್ನು ಒಪ್ಪಿಕೊಂಡು ತಾವುಗಳು ಈ ಸಮಸ್ಯೆಯ ಪರಿಹಾರದ ಬಗ್ಗೆ ಸಹಕಾರವನ್ನು ಕೊಡಬೇಕೆಂದು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರವನ್ನು ನೋಡಿದರೆ ಈ ವಿಷಯ ದೀರ್ಘವಾಗಿ ಚರ್ಚೆಯಾಗುವ ಅಗತ್ಯ ಕಂಡು ಬರುತ್ತದೆ. ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲೇ ಮುಗಿಸದೇ ಇವತ್ತು ಅಥವಾ ನಾಳೆ ಎರಡೂವರೆ ಗಂಟೆಗಳ ಕಾಲ ಈ ಬಗ್ಗೆ ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಗ ಈ ವಿಚಾರ ಇಷ್ಟು ವಿಕೋಪಕ್ಕೆ ಹೋಗಲು ಕಾರಣವೇನೆಂಬುದು ಗೊತ್ತಾಗುತ್ತದೆ. ಇದರಲ್ಲಿ ಏನೆಲ್ಲಾ ಆಗಿದೆಯೆಂಬುದು ಬಯಲಿಗೆ ಬರುತ್ತದೆ. ಕಳೆದ 6 ತಿಂಗಳಲ್ಲಿ ರೈತರ ಬಗ್ಗೆ ಏನೇನು ರಿಯಾಯಿತಿ ಕೊಟ್ಟಿದ್ದಾರೆ, ಏನು ಸೌಲಭ್ಯ ಕೊಟ್ಟಿದ್ದಾರೆ ಎಂಬ ಬಗ್ಗೆ ಶ್ವೇತ ಪತ್ರವನ್ನು ಹೊರತರಲಿ. ಕೇವಲ ಒಂದು ಹಾರಿಕೆ ಉತ್ತರದಿಂದ ಸರ್ಕಾರದ ನಿಲುವು ಏನು ಎಂಬುದು ನಮಗೆ ಸ್ಪಷ್ಟವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಬಹುದಲ್ಲ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಗುವುದಿಲ್ಲ. ಇದು ಈಗಲೇ ಚರ್ಚೆಯಾಗಬೇಕು.

ಶ್ರೀ ಜೆ. ಡಿ. ಸೋಮಪ್ಪ.—ರೈತರನ್ನು ಜೀವಂತ ಹೂತಾಕುತ್ತಿದ್ದಾರೆ. ಈ ಬಗ್ಗೆ ದೀರ್ಘ ಚರ್ಚೆ ಆಗಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಚರ್ಚೆ ಪ್ರತ್ಯೇಕವಾಗಿ ಆಗಬೇಕೆಂದು ಹೇಳಿದಾಗ.....

ಶ್ರೀ ಎಚ್. ಡಿ. ಚೌಡಯ್ಯ.—ಕೈಗಾರಿಕಾ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಧರಣಿಯಲ್ಲಿ ರೈತರ ಜೊತೆ ಕುಳಿತಿದ್ದ ಶಾಸಕರ ಪೈಕಿ ನಾನೂ ಒಬ್ಬ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯ ಒಂದೊಂದು ಪದಗಳ ಬಗ್ಗೆಯೂ ಚರ್ಚೆ ಮಾಡಬೇಕಾಗಿದೆ. 6–7 ದಿವಸಗಳ ಕಾಲ ರೈತರು 3ನೇ ಮಹಡಿಯಲ್ಲಿ ಕುಳಿತಿದ್ದು ಅವರಿಗೆ ಊಟ ಕೊಡುವುದರಲ್ಲಿ ತೊಂದರೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಹೇಳಿರುವ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇವತ್ತೂ ಕೂಡಾ ಹೊರಗಡೆ ರೈತರು ಅರೆಸ್ಟ್ ಆಗುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಬಗ್ಗೆ ಚರ್ಚೆಯಾಗಬೇಕೆಂದು ನೋಟೀಸ್ ಕೊಟ್ಟಿದ್ದೀರಿ. ನಿಯಮ 68ರ ಕೆಳಗೆ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಾದರೆ ಚರ್ಚೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರ ಸಮಸ್ಯೆಗಳ ಬಗ್ಗೆ ಹಿಂದೆ ಹೋರಾಟ ಮಾಡಲು

ನಾನು ನರಗುಂದ–ನವಲಗುಂದದಿಂದ ಬಂದಿದ್ದೇನು. ಬೇಕಾದರೆ ಈ ಬಗ್ಗೆ ಚರ್ಚೆ ಮಾಡಲಿ. ವೇಳೆಯನ್ನು ನಿಗದಿ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ಚರ್ಚೆಯನ್ನು ತಾವೇ ಮಾಡಬೇಕು. ಏತಕ್ಕೆ ಅಂದರೆ ಇದು ಸ್ವಯಂಕೃತ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಮಂತ್ರಿಗಳು ಈಗ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಹೊರಗಡೆ ಅನೇಕ ಜನ ರೈತರು ದಸ್ತಗಿರಿ ಆಗುತ್ತಿದ್ದಾರೆ, ಇದು ಬೇರೆ ಕಡೆಗೂ ವಿಸ್ತರಿಸಬಹುದು. ದಯವಿಟ್ಟು ಇವತ್ತೇ ಚರ್ಚೆಯನ್ನು ಮುಂದುವರಿಸಬೇಕು.

ಶ್ರೀ ಎಂ ಎಸ್. ಕೃಷ್ಣನ್.—ನಾನು ಎಲ್ಲರಿಗೂ ಯೀಲ್ಡಾಗಿದ್ದೇನೆ.

ಅಧ್ಯಕ್ಷರು.—ಅದು ನನ್ನ ತಪ್ಪಲ್ಲ. ಇದು ಬಹಳ ಮುಖ್ಯವಾದ ವಿಷಯವೆಂದು ಎಲ್ಲರೂ ಒಪ್ಪುತ್ತಾರೆ. ಸಮಯ ಬದಲಾವಣೆ ಮಾಡುವುದಕ್ಕೆ ತಮ್ಮ ಒಪ್ಪಿಗೆ ಇದ್ದರೆ.....

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ 68ರ ಪ್ರಕಾರ ಎಂದು ಹೇಳಿದ್ದೀರಿ ? ಕಾಲ ಅಟೆನ್ಷನ್ ಮೋಷನ್ ಪರಿವರ್ತನೆ ಮಾಡಿ, ವೇಳೆಯನ್ನು ನಿಗದಿ ಮಾಡಿದರೆ ನನ್ನ ಅಭ್ಯಂತರ ಇಲ್ಲ. ನಿಯಮ 68ರ ಪ್ರಕಾರ ಮೋಷನ್ ರೂಪದಲ್ಲಿ ತರಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪರಿವರ್ತನೆ ಮಾಡಿ, ನಾಳೆ ಚರ್ಚೆಗೆ ತೆಗೆದುಕೊಳ್ಳಬಹುದು. ಇವತ್ತು ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾಳೆ ಚರ್ಚೆ ಮಾಡೋಣ. ಮಾನ್ಯ ಸದಸ್ಯರಾದ ಚೌಡಯ್ಯನವರು ಹೇಳಿದ್ದು ರೈತರು ದಸ್ತಗಿರಿ ಆಗುತ್ತಿದ್ದಾರೆಂದು ಹೇಳಿದರು. ಯಾವಾಗಲೂ ನಡೆಯದೇ ಇರುವಂಥಾ ಕೆಲಸವನ್ನು ಮೊನ್ನೆ ಸರ್ಕಾರದವರು ಮಾಡಿದ್ದಾರೆ. ರೈತರು ಬೆಂಗಳೂರಿಗೆ ಪ್ರವೇಶ ಮಾಡಬಾರದು ಎನ್ನುವ ದೃಷ್ಟಿಯಿಂದ, ಅವರುಗಳನ್ನು ಹೊರವಲಯದಲ್ಲಿಯೇ ದಸ್ತಗಿರಿ ಮಾಡಿದ್ದಾರೆ. ರೈತರ ಅನುಕಂಪವನ್ನು ಈಗಾಗಲೇ ಮರೆತು ಬಿಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಹಾಗೆ ನಾವು ಗುಂಡು ಹಾಕಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸರ್ವಾಧಿಕಾರದ ಗದೆಯನ್ನು ರೈತರ ಮೇಲೆ ತಿರುಗಿಸಬೇಡಿ.

ಶ್ರೀ ಆರ್. ಎಲ್. ಜಾಲಪ್ಪ. ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿಗೆ ಬಂದಂಥ ರೈತರನ್ನು ದೂರ ದೂರದ ಸ್ಥಳಗಳಿಗೆ ಬಿಟ್ಟು ಬಂದಿರಿ. 130 ಜನರನ್ನು ಗುಂಡಿಕ್ಕಿ ಕೊಂದಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯವನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳುತ್ತೀರಾ ? ನಾಳೆ ತೆಗೆದುಕೊಳ್ಳುತ್ತೀರಾ ? ಪ್ರಜಾಪ್ರಭುತ್ವದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಇವರು ಗುಂಡು ಹಾಕಿದರೂ ತಪ್ಪೆ. ಅವರು ಗುಂಡು ಹಾಕಿದರೂ ತಪ್ಪೆ. ಗುಂಡೂರಾಯರ ಸರ್ಕಾರದಲ್ಲಿಲ್ಲ–130 ಜನ ರೈತರನ್ನು ಗುಂಡಿಕ್ಕಿ ಸಾಯಿಸಿದ್ದನ್ನು ಮರೆತುಬಿಟ್ಟು ಮಾತನಾಡುತ್ತಿದ್ದಾರೆ. ಅದನ್ನು ಸ್ವಲ್ಪ ಗಮನದಲ್ಲಿಟ್ಟುಕೊಂಡು ಮಾತನಾಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಕೃಷ್ಣನ್‌ನವರು ತುತ್ತೂರಿ ಊದುವ ಕೆಲಸ ಏತಕ್ಕೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತುತ್ತೂರಿಯಲ್ಲ. ಆ ಪಕ್ಷ ಮಾಡಿದಂಥ ದಬ್ಬಾಳಿಕೆಯನ್ನು ಖಂಡಿಸಲೇ ಬೇಕು.

ಅಧ್ಯಕ್ಷರು.—ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಪೂರಕವಾಗಿ ನಿಯಮ 68ರ ಮೇರೆಗೆ ಶ್ರೀಮಾನ್ ಯಡಿಯೂರಪ್ಪನವರು, ವಿ. ಎಸ್. ಆಚಾರ್ಯ ಅವರು, ವಸಂತ ಬಂಗೇರ ಅವರು ಕೊಟ್ಟಿದ್ದಾರೆ. ಈ ಸೂಚನೆಯನ್ನು ವಿಧಿ ನಿಯಮ 68ರ ಮೇರೆಗೆ, ನಾಳೆ ಚರ್ಚೆಗೆ ತೆಗೆದುಕೊಳ್ಳಲಾಗುವುದು. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ವಿ. ಎಸ್. ಆಚಾರ್ಯ.—ಸಾರ್ವಜನಿಕವಾಗಿ ಪ್ರಾಮುಖ್ಯವಾದ ವಿಷಯದ ಬಗ್ಗೆ ಅಂದರೆ ಇಂದಿನ ಬೆಲೆ ಏರಿಕೆಯಿಂದ ತತ್ತರಿಸಿ ಹೊಗಿರತಕ್ಕಂಥ ಜನತೆಯ ದೃಷ್ಟಿಯಿಂದ ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ. ಇವತ್ತು ಅಕ್ಕಿ 5ರೂ. ಆಗಿದೆ. ಸೀಮೆಎಣ್ಣೆ ಮತ್ತು ಸಿಮೆಂಟು ಸಿಗುತ್ತಿಲ್ಲ. ಮಕ್ಕಳಿಗೆ ಟೆಕ್ಸ್ಟ್ ಬುಕ್ ಹಾಗೂ ಲೇಖಕ್ ಪುಸ್ತಕಗಳು ಸಿಗುತ್ತಿಲ್ಲ. ಈ ವಿಚಾರದಲ್ಲಿ ಪ್ರಸ್ತಾಪ ಮಾಡಲು ಸಮಯ ಗೊತ್ತು ಮಾಡಿದರೆ, ನಾನು ಕುಳಿತುಕೊಳ್ಳುತ್ತೇನೆ.

ಶಾಸನ ರಚನಾ ಕಾರ್ಯಕ್ರಮಗಳು

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ (ತಿದ್ದುಪಡಿ) ವಿಧೇಯಕ, 1983.

ಮಂಡನೆ ಕೋರುವ ಪ್ರಸ್ತಾವ.

ಮಾನ್ಯ ಬೊಮ್ಮಾಯಿಯವರು ವಿಧೇಯಕವನ್ನು ಮಂಡಿಸಬೇಕು.